ಸಿ.ಸಿ. ನಂ. 567/2019 ಪಿ.ಡಬ್ಲ್ಯೂ-1

**ಸಾಕ್ಷಿಗೆ ದಿನಾಂಕ 21.10.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿಯ ನಿರ್ಲಕ್ಷ್ಯತನದಿಂದ ತೀರಿಕೊಂಡ ನಾಗರಾಜು ನನ್ನ ಮಗನಾಗಿರುತ್ತಾನೆ. ನನ್ನ ಮಗ ತೀರಿಕೊಂಡ ನಂತರ ಆರೋಪಿಯು ನನ್ನ ವಿರುದ್ಧ ದೂರು ನೀಡಬೇಡಿ, ನನ್ನ ಹೆಂಡತಿಗೆ ಸಂಬಂಧಪಟ್ಟ ಮನೆಯನ್ನು ನಿಮ್ಮ ಹೆಸರಿಗೆ ಮಾಡಿಕೊಡುತ್ತೇನೆ ಎಂದು ದಿನಾಂಕ 28.10.2017 ರಂದು ಆರೋಪಿಯು ನೋಂದಣಿ ಕಛೇರಿಗೆ ನನ್ನನ್ನು ಹಾಗೂ ನನ್ನ ತಮ್ಮನಾದ ಗುರುಸ್ವಾಮಿ ರವರನ್ನು ಕರೆದುಕೊಂಡು ಹೋಗಿ ನನ್ನ ತಮ್ಮನ ಹೆಸರಿಗೆ ಆರೋಪಿಯ ಹೆಂಡತಿಯ ಹೆಸರಿನಲ್ಲಿದ್ದ ಮನೆಯನ್ನು ನೊಂದಣಿ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯು ಆರೋಪಿ ಮತ್ತು ಆತನ ಹೆಂಡತಿ ಬರೆದುಕೊಟ್ಟಿರುವ ನೋಂದಣಿ ಕರಾರುಪತ್ರದ ದೃಢೀಕೃತ ನಕಲಾಗಿರುತ್ತದೆ. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ34 ಎಂದು ಗುರುತಿಸಲಾಯಿತು. ಸದರಿ ಕರಾರುಪತ್ರದ ಪ್ರಕಾರ ಆರೋಪಿಯು ಮನೆಯ ಕ್ರಯಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಮತ್ತು ಪರಿಹಾರ ನೀಡುತ್ತೇನೆ ಎಂದು ಹೇಳಿರುವ ಹಣವನ್ನು ನೀಡಿರುವುದಿಲ್ಲ. ಆ ಕಾರಣ ನನ್ನ ಮಗ ತೀರಿಕೊಂಡ 6 ತಿಂಗಳ ನಂತರ ನಿಪಿ1 ರಂತೆ ದೂರು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ**

ನಿಪಿ34 ದಾಖಲೆಯನ್ನು ಬರೆದುಕೊಟ್ಟ ಸಮಯದಲ್ಲಿ ನಾನು ನೋಂದಣಿ ಕಛೇರಿಗೆ ಹೋಗಿರುವುದಿಲ್ಲ. ನೋಂದಣಿ ಕಛೇರಿಗೆ ನನ್ನ ತಮ್ಮನಾದ ಗುರುಸ್ವಾಮಿ ಹಾಗೂ ಇತರ 15 ಜನರು ಹೋಗಿದ್ದರು. ಅವರ ಪೈಕಿ ಗುರುಸ್ವಾಮಿ, ಬಸವರಾಜು, ಜಗದೀಶ, ಮಹದೇವಪ್ಪ, ಶಂಭುಲಿಂಗಪ್ಪ, ಬಸವಣ್ಣ ಹಾಗೂ ಮಂಜುಸ್ವಾಮಿ ರವರ ಹೆಸರು ಗೊತ್ತಿರುತ್ತದೆ. ನಿಪಿ34 ದಾಖಲೆಗೆ ಒಟ್ಟು 6 ಜನರು ಸಹಿ ಮಾಡಿರುತ್ತಾರೆ. ಗುರುಸ್ವಾಮಿ, ಆರೋಪಿ, ಆರೋಪಿಯ ಹೆಂಡತಿ, ಶಂಭುಲಿಂಗಪ್ಪ ಮತ್ತು ಇನ್ನೊಬ್ಬರು ಸಹಿ ಮಾಡಿರುತ್ತಾರೆ. ಅವರು ಸಹಿ ಮಾಡಿರುತ್ತಾರೆ ಎಂದು ನಿಪಿ34 ದಾಖಲೆಯನ್ನು ನೋಡಿದಾಗ ಗೊತ್ತಾಗಿರುತ್ತದೆ. ನಿಪಿ34 ರ ಮೂಲ ದಾಖಲೆಯು ನನ್ನ ಬಳಿ ಇರುತ್ತದೆ. ಮೂಲ ದಾಖಲೆಯನ್ನು ಪೋಲಿಸರಿಗೆ ನೀಡಲು ಯಾವುದೇ ತೊಂದರೆ ಇರಲಿಲ್ಲ. ನನ್ನ ಮಗ ನಾಗರಾಜು ತೀರಿಕೊಂಡಾಗ ನಾನು ಮತ್ತು ನನ್ನ ಕುಟುಂಬಸ್ಥರು ಶವ ಸಂಸ್ಕಾರ ಮಾಡಿರುತ್ತೇವೆ. ಆರೋಪಿಯು ಶವಸಂಸ್ಕಾರಕ್ಕೆ ಬಂದಿರುತ್ತಾರಾ ಎಂದರೆ ಸಾಕ್ಷಿದಾರರು ಆರೋಪಿಯು ಬಂದಿರುವುದಿಲ್ಲ, ಆದರೆ ಮೊದಲೇ ತೀರ್ಮಾನ ಮಾಡಿಕೊಂಡು ಹೋಗಿರುತ್ತಾರೆ ಎನ್ನುವರು. ನಿಪಿ34 ರಲ್ಲಿ ನನ್ನ ಮಗ ತೀರಿಕೊಂಡಿರುವ ಬಗ್ಗೆ ಪರಿಹಾರ ಬಾಬ್ತು ಕರಾರುಪತ್ರ ಮಾಡಿಕೊಂಡಿರುತ್ತೇವೆ ಎಂದು ಬರೆದಿರುವುದಿಲ್ಲ. ನಿಪಿ34 ರಲ್ಲಿ ಸಹಿ ಮಾಡಿರುವ ಲತಾ.ಸಿ ರವರು ಈ ಪ್ರಕರಣದಲ್ಲಿ ಆರೋಪಿಯಾಗಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಗುರುಸ್ವಾಮಿ ರವರು ಈ

ಪ್ರಕರಣದಲ್ಲಿ ಸಾಕ್ಷಿದಾರರಾಗಿರುವುದಿಲ್ಲ ಎಂದರೆ ಸರಿ. ನಿಪಿ34ರಲ್ಲಿ ಗುರುಸ್ವಾಮಿ ರವರು 10 ಲಕ್ಷ ರೂಪಾಯಿಗಳನ್ನು ಆರೋಪಿ ಮತ್ತು ಆತನ ಹೆಂಡತಿಗೆ ಸಂದಾಯ ಮಾಡಿರುತ್ತಾರೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಬಾಕಿ ಉಳಿದಿರುವ 8 ಲಕ್ಷ ಹಣವನ್ನು 6 ತಿಂಗಳಿನಲ್ಲಿ ನೀಡಬೇಕೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ನಿಪಿ34ರ ಪ್ರಕಾರ ನನ್ನ ತಮ್ಮನಾದ ಗುರುಸ್ವಾಮಿ ರವರು ಆರೋಪಿಗೆ ವಕೀಲರ ಮೂಲಕ ನೋಟಿಸನ್ನು ನೀಡಿರುವುದಿಲ್ಲ. ನಿಪಿ34ರ ಪ್ರಕಾರ ಗುರುಸ್ವಾಮಿ ರವರು ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಗುರುಸ್ವಾಮಿರವರು ವಕೀಲರ ಮೂಲಕ ನೋಟಿಸನ್ನು ನೀಡಲು ಹಾಗೂ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿದಾರರು ಮುಂದುವರೆದ 6 ತಿಂಗಳ ನಂತರ ಕ್ರಯಪತ್ರ ಬರೆದುಕೊಡಿ ಎಂದು ಕೇಳಿದ್ದು ಬರೆದುಕೊಡದಿದ್ದರಿಂದ ಈ ಕೇಸನ್ನು ದಾಖಲಿಸಿರುತ್ತೇವೆ ಎನ್ನುವರು. ನಿಪಿ1 ದೂರಿನಲ್ಲಿ ನಿಪಿ34 ಕರಾರುಪತ್ರದ ಬಗ್ಗೆ ನಮೂದು ಮಾಡಿರುವುದಿಲ್ಲ. ನಿಪಿ34ಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಆರೋಪಿಯ ನಿರ್ಲಕ್ಷ್ಯತನದಿಂದ ಮೃತಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ31ರಲ್ಲಿ ನನ್ನ ಮಗ ಹಂಪಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿರುತ್ತಾನೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ, ಆರೋಪಿಗೆ ತೊಂದರೆ ನೀಡಲು ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ